ಪುಟ ಬಂಗಾರ

# ಅಣ್ಣ ಬಲ್ಲಾಳ



## ಯಶವಂತ ಚಿತ್ತಾಲ

ಇದು ವ್ಯಾಸರಾಯ ಬಲ್ಲಾಳರ ಮೇಲಿನ ಪ್ರಬಂಧವಲ್ಲ. ನಾವು ಮೆಚ್ಚಿಕೊಂಡ ಒಬ್ಬ ವ್ಯಕ್ತಿಗೆ ಪ್ರೀತಿ-ಗೌರವಗಳನ್ನು ಸಲ್ಲಿಸಲು ಪ್ರಬಂಧದಂಥ ಬರವಣಿಗೆ ಸರಿಯಾದ ಮಾಧ್ಯಮವೇ ಅಲ್ಲವೇನೋ - ನನ್ನ ಮಟ್ಟಿಗಂತೂ ಅಲ್ಲ. ಮೇಲಾಗಿ ಬಾಳರು ನನ್ನ ಪಾಲಿಗೆ ಕೇವಲ ಒಬ್ಬ ವ್ಯಕ್ತಿಯಲ್ಲ; ನನ್ನನ್ನು ಗಾಢವಾಗಿ ಪ್ರಭಾವಿಸಿದ ಒಂದು ಅನನ್ಯ ಅನುಭವ. ಗಾಢವಾದ ಅನುಭವ ನಮ್ಮನ್ನು ತಟ್ಟುವುದು, ಪ್ರಜ್ಞೆಗೆ ಹೊಳೆಯುವುದು ಜೀವಂತ ಪ್ರತಿಮೆಗಳ ಮೂಲಕ, ರೂಪಗಳ ಮೂಲಕ. ಹಾಗೆಂದೇ ಇಂಥ ಅನುಭವವನ್ನು ಇನ್ನೊಬ್ಬರಿಗೆ ಮುಟ್ಟಿಸಲು ಹೊರಟಾಗ ನಮ್ಮೊಳಗಿನ ಎಂಥವನೂ ಕೂಡ ಇಂಥ ಭಾವನಾತ್ಮಕ ಕ್ಷಣಗಳಲ್ಲಿ ಸಹಜವಾಗಿಯೇ ಕವಿಯಾಗುತ್ತಾನೆ. ಅಂದಮೇಲೆ ನಾನಾದರೂ ಈ ಸಹಜ ನಿಯಮಕ್ಕೆ ಏಕೆ ಅಪವಾದವಾಗಲಿ?

ಬಲ್ಲಾಳರು ಒಂದು ಅನನ್ಯ ಅನುಭವವಾಗಿ ನನ್ನಲ್ಲಿ ಮೂಡಿಸಿದ್ದು ಒಂದು ವಾತ್ಸಲ್ಯಮೂರ್ತಿಯ ಪ್ರತಿಮೆಯನ್ನು, ಅಣ್ಣನ ಪ್ರತಿಮೆಯನ್ನು. ಅವರು ನನ್ನ ಬದುಕಿನಲ್ಲಿ ಬಂದದ್ದೇ ಒಬ್ಬ ಅಣ್ಣನಾಗಿ. 'ಅಣ್ಣ ಬಲ್ಲಾಳ' - ನನ್ನ ಪಾಲಿಗೆ ಒಂದು ಸಂಬಂಧವಾಚಕ ಪದವಾಗಿರದೇ ನಾನು ಅವರನ್ನು ಅನುಭವಿಸುತ್ತ ಬಂದ ರೀತಿಯ ವರ್ಣನೆಯಾಗಿದೆ. ನಿಜವಾಗಿ ನೋಡಿದಲ್ಲಿ 'ಅಣ್ಣ' ಇದು ಸಂಬಂಧದ ಹೆಸರೇ ಅಲ್ಲ, ಬದಲಾಗಿ ನಾನು ನಂಬಿಕೆ ಇಟ್ಟುಕೊಂಡ ಒಂದು ಮೌಲ್ಯವಾಗಿದೆ. ಅಣ್ಣನಷ್ಟು ಮೌಲಿಕವಾದ ಸಂಗತಿ ಜಗತ್ತಿನಲ್ಲಿ ಇನ್ನೊಂದಿಲ್ಲ ಎಂದು ತಿಳಿದ ನನ್ನ ಸಾಹಿತ್ಯದಲ್ಲಿ 'ಅಣ್ಣನ ಹುಡುಕಾಟ' ಮತ್ತೆ ಮತ್ತೆ ಕಾಣಿಸಿಕೊಂಡದ್ದು ಇದೇ ಕಾರಣಕ್ಕಾಗಿರಬಹುದೆ?

ಇಂಥ ಒಂದು ನಂಬಿಕೆ ಕುಸಿಯದ ಹಾಗೆ ನೋಡಿಕೊಂಡ, ಅಷ್ಟೇಕೆ, ತಮ್ಮ ವಾತ್ಸಲ್ಯಪೂರ್ಣ ವರ್ತನೆಯಿಂದ ಅದನ್ನು ಇನ್ನಷ್ಟು ಗಟ್ಟಿಗೊಳಿಸಿದ ಕೆಲವೇ ವ್ಯಕ್ತಿಗಳಲ್ಲಿ ಬಲ್ಲಾಳರು ಮುಖ್ಯರು. ನನ್ನ ಆರನೆಯ ಕಥಾಸಂಗ್ರಹ - 'ಸಿದ್ಧಾರ್ಥ' ಈ ಅಣ್ಣನಿಗೇ ಅರ್ಪಿತವಾಗಿದೆ.

ನನ್ನ 'ಸಮಗ್ರ ಕತೆ'ಗಳಿಗೆ ನಾನೇ ಬರೆದ 'ಹೃದಯವುಳ್ಳ ಹಾದಿಯಲ್ಲಿ' ಹೆಸರಿನ ಮುನ್ನುಡಿಯ ಆರಂಭದಲ್ಲಿ ಕಾಮ್ರಾನ ಪುಸ್ತಕದಿಂದ ಉದ್ಧೃತಗೊಂಡ ಒಂದು ಮಾತಿದೆ:

"ಯಾವ ಹಾದಿಯೇ ಆಗಲಿ, ಅದು ಕೊನೆಗೂ ಒಂದು ಹಾದಿ ಮಾತ್ರ. ಪ್ರತಿಯೊಂದು ಹಾದಿಯನ್ನು ಆದಷ್ಟು ಕೂಲಂಕಷವಾಗಿ ನೋಡು, ಆದಷ್ಟು ಸಾರ ಪರೀಕ್ಷೆ ಮಾಡಿ ನೋಡು. ಆಮೇಲೆ ನಿನಗೆ, ನಿನಗೊಬ್ಬನಿಗೆ ಮಾತ್ರ, ಒಂದು ಪ್ರಶ್ನೆಯನ್ನು ಕೇಳಿಕೋ: ಈ ಹಾದಿಗೆ ಹೃದಯವಿದೆಯೆ? ಇದೆಯೆಂದಾದರೆ ಅದು ಒಳ್ಳೆಯ ಹಾದಿ. ಇಲ್ಲವಾದರೆ ಅದು ನಿಷ್ಪ್ರಯೋಜಕ."

ಈ ಉದ್ಧರಣದಲ್ಲಿ ನಾನು ತುಂಬಾ ಮೆಚ್ಚಿಕೊಂಡದ್ದು - 'ಹೃದಯವುಳ್ಳ ಹಾದಿ' - 'The path with a heart' - ಎಂಬ ಪದ ಪ್ರಯೋಗವನ್ನು. ಇದನ್ನು ಗಮನಿಸಿದ ಗೆಳತಿಯರೊಬ್ಬರು, 'ನೀವು ಓದಿದ ಕಾಪ್ರಾನ ಪುಸ್ತಕಕ್ಕಿಂತ ಬಹಳ ಹಿಂದೆಯೇ ಬಂದಿರಬಹುದಾದ ಬಲ್ಲಾಳರ ಪ್ರಖ್ಯಾತ ಕಾದಂಬರಿಯ ಹೆಸರು, 'ವಾತ್ಸಲ್ಯಪಥ'ಕ್ಕೆ ಕೂಡ ಇದೇ ಅರ್ಥವಲ್ಲವೆ? - ಹೃದಯವುಳ್ಳ ಹಾದಿಯೆಂದು?' ಎಂದು ಕೇಳಿದಾಗ